# ಸೇತುಬಂಧ ನೈದಾನಿಕ ಪರೀಕ್ಷೆ – 8 ನೆಯ ತರಗತಿ – ಪ್ರಥಮ ಭಾಷೆ ಕನ್ನಡ ಪ್ರಶ್ನೋತ್ತರ ಪತ್ರಿಕೆ

| ವಿದ್ಯಾರ್ಥಿಯ ಹೆಸರು: | ದಾಖಲಾತಿ ಸಂಖ್ಯೆ: |
|---|---|

**ಸಾಮರ್ಥ್ಯ – 1. ಮೌಖಿಕವಾಗಿ ಪ್ರಶ್ನೆಗಳನ್ನು ಕೇಳಿ, ಉತ್ತರ ಪಡೆಯುವುದು.**
(ವಿದ್ಯಾರ್ಥಿಗಳಿಗೆ ನಾಣ್ಣುಡಿ, ಪದಪುಂಜ, ನುಡಿಗಟ್ಟು, ಸೌಮ್ಯೋಕ್ತಿಗಳಿಗೆ ಸಂಬಂಧಪಟ್ಟಂತೆ ಸೂಕ್ತ ಪ್ರಶ್ನೆಗಳನ್ನು ಕೇಳಿ ಮೌಖಿಕವಾಗಿ ಉತ್ತರ ಪಡೆಯುವುದು.)

**ಸಾಮರ್ಥ್ಯ – 2. ಕೆಳಗಿನ ಗದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಹೊಲಗಳಲ್ಲಿ ಹಾವುಗಳು ಇಲಿಗಳನ್ನು ತಿಂದು ಜೀವಿಸುತ್ತಿದ್ದವು. ಅವುಗಳನ್ನು ನಾಶ ಮಾಡಿದ್ದರಿಂದ ವಿನಾಯಕನ ವಾಹನಗಳು ಅತಿಯಾಗಿ ಬೆಳೆದು ಗುಲ್ಬರ್ಗಾ ಜಿಲ್ಲೆಯಲ್ಲಿ ಮಾನವನ ಆಹಾರವನ್ನೇ ಭಕ್ಷಿಸಿ ಅವನು ಹೌಹಾರುವಂತೆ ಮಾಡಿದೆ. ಟ್ರಾಂಪ್ ಟ್ರಾಂಪ್ ಎಂದು ಹಾಡಿ ಮಳೆರಾಯನನ್ನು ಬರ ಮಾಡಿಕೊಳ್ಳುವ ಕಪ್ಪೆಯರಸನ ಮೇಲೆ ಮಾನವನು ಕೊಲೆಗಡುಕನ ಕತ್ತಿಯನ್ನೆತ್ತಿದ್ದಾನೆ. ಅವುಗಳ ಕಾಲುಗಳಿಗೆ ಪಾಶ್ಚಾತ್ಯ ದೇಶಗಳಲ್ಲಿ ಬೇಡಿಕೆ ಇರುವುದರಿಂದ ಅವುಗಳನ್ನು ಸಿಕ್ಕಲ್ಲಿ ಹಿಡಿದು ಕೊಂದು ಕಿಸೆ ತುಂಬಿಸಿಕೊಳ್ಳುತ್ತಿದ್ದಾನೆ. ಮಾನವನು ಬೆಳೆದ ಆಹಾರ–ಧಾನ್ಯಗಳಲ್ಲಿ ಶೇಕಡ 10–15 ರಷ್ಟು ಬೆಳೆಗಳನ್ನು ಕ್ರಿಮಿಕೀಟಗಳು ನಾಶ ಮಾಡುತ್ತವೆ ಎಂದು ಲೆಕ್ಕಾಚಾರ ಹಾಕಿದ್ದಾರೆ. ಒಂದು ಕಪ್ಪೆ ದಿನವೊಂದಕ್ಕೆ 100–200 ತನಕ ಕ್ರಿಮಿಕೀಟಗಳನ್ನು ಭಕ್ಷಿಸಿ ಎಷ್ಟೋ ಆಹಾರ ಧಾನ್ಯಗಳನ್ನು ಸಂರಕ್ಷಿಸುತ್ತದೆ.

**ಪ್ರಶ್ನೆಗಳು**

**(ಎ) ಹಾವುಗಳ ನಾಶದಿಂದ ಮಾನವನ ಆಹಾರವೂ ನಾಶವಾಗುತ್ತವೆ ಹೇಗೆ?**

**(ಬಿ) ಕಪ್ಪೆಗಳನ್ನು ರೈತನ ಮಿತ್ರ ಎಂದು ಏಕೆ ಕರೆಯುತ್ತಾರೆ?**

**ಸಾಮರ್ಥ್ಯ – 3. ಕೆಳಗಿನ ಪ್ರತಿ ಉಪಪ್ರಶ್ನೆಗೂ ಹೇಳಿಕೆಯಂತೆ ಉತ್ತರ ಬರೆಯಿರಿ.**

**1. ಕೆಳಗಿನ ವಿಶಿಷ್ಟ ಪದಪುಂಜಗಳಿಗೆ ಅರ್ಥ ಬರೆದು, ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

(ಎ) ಶತಮಾನೋತ್ಸವ

(ಬಿ) ಪ್ರಾಯಶ್ಚಿತ್ತ

**2. ಕೆಳಗಿನ ಪದಗಳಿಗೆ ಅರ್ಥ ಬರೆದು, ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

(ಎ) ಪಾಕ್ಷಿಕ

(ಬಿ) ಶುಶ್ರೂಷೆ

**3. ಕೆಳಗಿನ ಪದಗಳ ಸಮಾನಾರ್ಥಕ ಪದವನ್ನು ಬರೆದು, ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

(ಎ) ಆರಾಧನೆ

(ಬಿ) ಪಂಕ್ತಿ

**4. ಕೆಳಗಿನ ಪದಗಳಿಗೆ ಭಿನ್ನಾರ್ಥ ಬರೆದು, ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

(ಎ) ಅರಸು

(ಬಿ) ಕಾಡು

**5. ಕೆಳಗಿನ ಪದಗಳಿಗೆ ಪ್ರತಿಯೊಂದಕ್ಕು ಎರಡು ಸಮಾನಾರ್ಥಕ ಬರೆಯಿರಿ.**

(ಎ) ಗಜ

(ಬಿ) ಸೂರ್ಯ

**ಸಾಮರ್ಥ್ಯ – 4. ಈ. ಕೆಳಗಿನವುಗಳಲ್ಲಿ ಅರ್ಥ ವ್ಯತ್ಯಾಸವನ್ನು ತಿಳಿದು, ಸ್ವಂತವಾಕ್ಯಗಳಲ್ಲಿ ಬಳಸಿ ಬರೆಯಿರಿ.**

1. ಪ್ರದಾನ – ಪ್ರಧಾನ

2. ಕೈಕೊಡು – ಕೈಗೂಡು

**ಸಾಮರ್ಥ್ಯ – 5. ಕೆಳಗಿನ ವಾಕ್ಯಗಳಿಗೆ ಲೇಖನ ಚಿಹ್ನೆಗಳನ್ನು ಬಳಸಿ ಬರೆಯಿರಿ.**

1. ಕಾಯಕವೇ ಕೈಲಾಸ ಎಂದು ಬಸವಣ್ಣನವರು ಹೇಳಿದ್ದಾರೆ

2. ನಿನ್ನ ಹೆಸರೇನು

**ಸಾಮರ್ಥ್ಯ – 6. ಕೆಳಗಿನವುಗಳಿಗೆ ಉತ್ತರ ಬರೆಯಿರಿ.**

1. ಪದ್ಯದ ರಚನಾ ನಿಯಮವನ್ನು ತಿಳಿಸುವ ಶಾಸ್ತ್ರ ಯಾವುದು?

2. ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಅಕ್ಷರಗಳಿಗೆ ಏನೆಂದು ಕರೆಯುತ್ತಾರೆ?

3. ಕೆಳಗಿನ ಪದಗಳಿಗೆ ಪ್ರಸ್ತಾರ ಹಾಕಿರಿ.

(ಎ) ಮಂದಾರ (ಬಿ) ಪುಣ್ಯಾತ್ಮ